**ಅಸಲು ದಾವಾ ಸಂಖ್ಯೆ-179/2020** **ಪಿ.ಡಬ್ಲ್ಯೂ:- 1**

ದಿನಾಂಕಃ **21-03-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು:- ಪ್ರತಿವಾದಿ ಪರ ವಕೀಲರಿಂದ:-

ದಾವಾ ಆಸ್ತಿಯು ಪ್ರತಿವಾದಿಗೆ ಹೇಗೆ ಬಂತು ಎಂಬ ವಿಚಾರ ನನಗೆ ಗೊತ್ತಿಲ್ಲ. ನಿಪಿ-1 ಕರಾರು ಪತ್ರದಲ್ಲಿ ದಾವಾ ಆಸ್ತಿಯು 1 ನೇ ಪ್ರತಿವಾದಿಗೆ ಹೇಗೆ ಬಂತು ಎಂದು ನಮೂದಾಗಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ-1 ಕರಾರು ಪತ್ರವನ್ನು ಪ್ರತಿವಾದಿ ನನಗೆ ಬರೆದುಕೊಟ್ಟಿಲ್ಲ ನಾನು ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ನಾನೇ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಊರಿನ ಪಕ್ಕದಲ್ಲಿ ಇದೆ ಎಂದರೆ ಸರಿ. ದಾವಾ ಆಸ್ತಿಯು ಊರಿನ ಪಕ್ಕದಲ್ಲಿರುವುದರಿಂದ ಮಾರುಕಟ್ಟೆ ಮೌಲ್ಯ ಜಾಸ್ತಿ ಇದೆ ಎಂದರೆ ಸರಿಯಲ್ಲ. ಪ್ರಸ್ತುತ ದಾವಾ ಆಸ್ತಿಯ ಮಾರುಕಟ್ಟೆಯ ಮೌಲ್ಯ ಎಷ್ಟಿದೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ನಿಪಿ-1 ಕರಾರು ಪತ್ರವನ್ನು ಮಾಡಿಸಿಕೊಳ್ಳುವ ಸಮಯದಲ್ಲಿ ದಾವಾ ಆಸ್ತಿಯ ಮೌಲ್ಯ ಎಷ್ಟಿದೆ ಎಂದು ಉಪನೋಂದಣಿ ಕಚೇರಿಯಲ್ಲಿ ವಿಚಾರಿಸಿರುವುದಿಲ್ಲ. ನಿಪಿ-1 ಕ್ರಯ ಪತ್ರದಲ್ಲಿ ನಮೂದಾಗಿರುವಂತೆ ದಾವಾ ಆಸ್ತಿಯನ್ನು ರೂ.1,50,000/- ಕ್ಕೆ ಮಾರಾಟ ಮಾಡುವ ಬಗ್ಗೆ ಕ್ರಯದ ಕರಾರುಪತ್ರವನ್ನು ಬರೆದುಕೊಟ್ಟಿಲ್ಲ ಮತ್ತು ಅದರಲ್ಲಿ ರೂ.1,40,000/- ಹಣವನ್ನು ಮುಂಗಡವಾಗಿ ಕೊಟ್ಟಿಲ್ಲ ಮತ್ತು ಬಾಕಿ ರೂ.10,000/- ಹಣವನ್ನು ಮಾತ್ರ ಕೊಡಬೇಕೆಂದು ಸುಳ್ಳು ಕರಾರು ಪತ್ರವನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯು ಅವಿದ್ಯಾವಂತರಾಗಿರುವುದನ್ನು ಮನಗಂಡು ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ನಿಪಿ-1 ಕರಾರು ಪತ್ರವನ್ನು ಸೃಷ್ಟಿ ಮಾಡಿ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ¾ ಎಕರೆಗೆ 6 ಗುಂಟೆ ಕಡಿಮೆ ಇದೆ

ಎಂದರೆ ಸರಿ. ದಾವಾ ಆಸ್ತಿಯು ½ ಎಕರೆಗಿಂತ ಜಾಸ್ತಿ ಜಮೀನು ಇರುವುದರಿಂದ ಮಾರುಕಟ್ಟೆ ಮೌಲ್ಯ ರೂ.1,50,000/- ಕ್ಕಿಂತ ಜಾಸ್ತಿ ಇದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ದಾವಾ ಆಸ್ತಿಯನ್ನು ನನಗೆ ಮಾರಾಟ ಮಾಡುವ ಉದ್ದೇಶ ಇದಿದ್ದರೆ ಆ ಸಮಯದಲ್ಲಿ ಎಷ್ಟು ಮಾರುಕಟ್ಟೆ ಮೌಲ್ಯ ಇತ್ತೋ ಅದಕ್ಕೆ ಪೂರಕವಾಗಿ ಕ್ರಯದ ಕರಾರು ಪತ್ರವನ್ನು ಬರೆದುಕೊಡುತ್ತಿದ್ದರು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ದಾವಾ ಆಸ್ತಿಯನ್ನು ನನಗೆ ಮಾರಾಟ ಮಾಡುವ ಉದ್ದೇಶ ಇದಿದ್ದರೆ ತನ್ನ ಉಳಿದ ಇಬ್ಬರೂ ಮಕ್ಕಳ ಸಹಿಯನ್ನು ಸಹ ಮಾಡಿಸುತ್ತಿದ್ದರು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ನನ್ನಿಂದ ಸ್ನೇಹಪೂರ್ವಕವಾಗಿ ರೂ.10,000/- ಹಣವನ್ನು ಪಡೆದುಕೊಂಡಿದ್ದು ಮತ್ತು ಅದನ್ನು ಈಗಲೂ ಸಹ ಬಡ್ಡಿ ಸಹಿತ ವಾಪಾಸ್ಸು ಕೊಡಲು ಸಿದ್ಧರಾಗಿದ್ದಾರೆ ಎಂದರೆ ಸರಿಯಲ್ಲ. ನಾನು ದಾವೆಯಲ್ಲಿ ಕೇಳಿರುವಂತೆ ಪರಿಹಾರವನ್ನು ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ:- ಇಲ್ಲ

ಸಾ. ಹೇ. ತೆ. ನ್ಯಾ ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.